O.S 38/2008
PW-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 15-03-2019.**

*ಮುಂದುವರೆದ ಪಾಟೀ ಸವಾಲು ಶ್ರೀ ಸಿ.ಎಸ್.ಡಿ ವಕೀಲರಿಂದ*

ನಮ್ಮ ಮನೆಯ ಮುಂದಿರುವ ಚರಂಡಿ ನಾವು ಮನೆ ಕಟ್ಟುವ ಮೊದಲಿನಿಂದಲೂ ಇದೇ ಎಂದರೆ ಈ ದಾವೆ ಸಲ್ಲಿಸುವ 2 ತಿಂಗಳ ಮೊದಲು 3 ನೇ ಪ್ರತಿವಾದಿ ಚರಂಡಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ನಾನು ಆರಸೀಕೆರೆಯಲ್ಲಿ ಕತರ್ವ್ಯದಲ್ಲಿ ಇದ್ದೆ. ನನ್ನ ಹೆಂಡತಿ ಮಕ್ಕಳು ಎಲ್ಲಾರು ಆರಸೀಕೆರೆಯ ಪೋಲೀಸರ್ ವಸತಿ ಗೃಹದಲ್ಲಿ ವಾಸವಾಗಿದ್ದರು.ಸದರಿ ಚರಂಡಿ ನಾವು ಮನೆ ಕಟ್ಟುವ ಮೊದಲಿನಿಂದಲೂ ಇದೇ ಎಂದರೆ ಸಂರಿಯಲ್ಲ.ನಾನು ಮನೆ ಕಟ್ಟಿದ್ದಗಿನಿಂದ ಚನ್ನರಾಯಪಟ್ಟಣದಲ್ಲಿ ಅದೇ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ದಕ್ಷಿಣ ದಿಕ್ಕಿನ ಗೋಡೆಗೆ 2 ಕಿಟಕಿ ಇದೆ.ಸದರಿ ಕಿಟಕಿಗಳಿಗೆ ಯಾವುದೇ ಸಜ್ಜೆ ಇಲ್ಲ ಎಂದರೆ ಸರಿ.ನಮ್ಮ ಮನೆಯ ಮಹಡಿ ಮೆಟ್ಟಿಲುಗಳು ವಕ್ರವಾಗಿ ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ.ನನ್ನ ಪೂರ್ವ ಮಾಲೀಕರು ಹಾಗೂ ನಾನು ಸದರಿ ನಿವೇಶನಕ್ಕೆ ನಗರ ಯೋಜನ ಪ್ರಾಧಿಕಾರದಿಂದ ನಕಾಶೆ ಅನುಮೋದನೆ ಪಡೆದಿಲ್ಲ ಎಂದರೆ ಸರಿಯಲ್ಲ.ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ.ನಗರ ಯೋಜನೆಯ ಪ್ರಾಧಿಕಾರದ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ.ನಗರ ಯೋಜನ ಪ್ರಾಧಿಕಾರ ಮತ್ತು ಪುರಸಭೆಯ ಅಧಿಕಾರಿಗಳ ಜೊತೆ ಶಾಮೀಲಾಗಿ ಯಾವುದೇ ಕಾನೂನು ಬದ್ಧವಾಗಿ ಅನುಮತಿ ಪಡೆಯದೆ ನಿಯಮ ಬಾಹಿರವಾಗಿ ನಿವೇಶನ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ದಕ್ಷಿಣ ದಿಕ್ಕಿಗೆ 60*13 ಅಡಿ ಜಾಗ ಪುರಸಭೆ ರಸ್ತೆ ಎಂದರೆ ಸರಿಯಲ್ಲ.ಸಾರ್ವಜನಿಕರಿಗೆ ಅಡ್ಡಿಪಡಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದೆರೆ ಸರಿಯಲ್ಲ.ದಾವ ಸ್ವತ್ತಿಗೆ ಪ್ರತಿವಾದಿಗಳು ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ ಅವರಿಗೆ ತೊಂದರೆ ಕೊಡುವ ಸಲುವಾಗಿ ಈ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಓ.ಸ.ಮಾ,**

O.S 38/2008
PW-1

*(ಎಸ್.ಚಿನ್ನಸ್ವಾಮಿ)*
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**